## ಅಕ್ಟೋಬರ್ 2023

# ಸೇವಾ ವಾಣಿ

### ಸೇವಾ ಸಂಗಮ

### ಆರ್ಬಿಟ್






ORBIT & SEVASANGAMA



**ಪೂಜ್ಯ ರಾಬರ್ಟ್ ಮಿರಾಂದಾ**
**ಗುಲ್ಬರ್ಗ ಧರ್ಮಾಧ್ಯಕ್ಷರು**

**ಫಾ. ವಿಕ್ಟರ್ ವಾಸ್**
**ನಿರ್ದೇಶಕರು**

## ರಕ್ತಕ್ಕೆ ಯಾವುದೇ ಜಾತಿಯಿಲ್ಲ, ರಕ್ತದಾನ ಮಾಡಿ ಜೀವ ಉಳಿಸಿ

"ಜನರ ಸೇವೆ ಮಾಡಲು ಹಲವಾರು ವಿಧಗಳಿವೆ ಮಾನವ ಜೀವ ಅತ್ಯಮೂಲ್ಯವಾಗಿದೆ, ರಕ್ತದಾನ ಮಾಡುವುದರಿಂದ ಇನ್ನೊಬ್ಬರ ಜೀವ ಉಳಿಯುತ್ತದೆ ಮತ್ತು ನಮ್ಮ ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯಾಗಿ ದೆಹಕ್ಕೆ ಆರೋಗ್ಯ ನೀಡುತ್ತದೆ" ಎಂದು ಹುಮ್ನಾಬಾದ್ ತಾಲೂಕಿನ ಜನಪ್ರಿಯ ಶಾಸಕರಾದ ಡಾ. ಸಿದ್ದಲಿಂಗಪ್ಪಾ ಪಾಟಿಲ್ ನುಡಿದರು ಹಾಗೂ ಕಲಬುರ್ಗಿ ಧರ್ಮಕ್ಷೇತ್ರದ ಶ್ರೇಷ್ಟ ಗುರುಗಳಾದ ಸ್ಟ್ಯಾನಿ ಲೋಬೊ ಅವರು ಮದರ ತೆರೇಸಾ ತಮ್ಮ ಜೀವನದಲ್ಲಿ ದೀನದಲಿತರ ಸೇವೆ ಸಲ್ಲಿಸಿದರು ಇವರ ಸೇವೆಯೇ ನಮ್ಮ ಸಂಸ್ಥೆಗೆ ಪ್ರೇರಣೆಯಾಗಿದೆ, ಈ ರಕ್ತದಾನ ಶಬಿರದ ನಿಮಿತ್ತ ಸಮಯಕ್ಕೆ ಸರಿಯಾಗಿ ಅಗತ್ಯವಿರುವವರಿಗೆ ರಕ್ತ ಸಿಗಬೇಕೆಂಬ ಉದ್ದೇಶದಿಂದ ನಾವು ನಮ್ಮ ಜೀವನದ ಜೋತೆಗೆ ಪರರ ಜೀವನಕ್ಕು ಜೀವ ಆಗಿರಬೇಕು, ಮನುಷ್ಯ ಪರೋಪಕಾರಿಯಾಗಿ ಬದುಕಬೇಕು ಮದರ ತೆರೇಸಾ ಅವರ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ತೋರಿದ ಮಾರ್ಗದಲ್ಲಿ ನಾವು ನಡೆಯಬೇಕು ಎಂದು ತಿಳಿಸಿದರು. ಆರ್ಬಿಟ್ ಸಂಸ್ಥೆಯಲ್ಲಿ 5ನೇ ಸಪ್ಟೆಂಬರ್ 2023 ರಂದು ಪಾಲಕಿ ಸಂತ ಮದರ ತೆರೇಸಾ ಸ್ಮರಣಾರ್ಥವಾಗಿ ಆರ್ಬಿಟ್ ಸಂಸ್ಥೆ, ಐ.ಸಿ.ವೈ.ಎಮ್, ಕಲಬುರ್ಗಿ ಧರ್ಮಕ್ಷೇತ್ರ ಮತ್ತು ರಕ್ತನಧಿ ಘಟಕ ಬೀದರ್ ಇವರ ಸಂಯುಕ್ತಶ್ರಯದಲ್ಲಿ ರಕ್ತದಾನ ಶಬಿರ ಹಮ್ಮಿಕೊಳ್ಳಲಾಯಿತು. ಈ ಒಂದು ರಕ್ತಧಾನ ಶಿಬಿರದಲ್ಲಿ 65 ಜನರು ರಕ್ತದಾನ ಮಾಡಿದರು.





Organization of Bidar Integral Transformation, ORBIT, NH 65, Near Railway Sation, Humnabad 585330
Web: www.orbitbidar.org E.mail: orbitbidar93@gmail.com Facebook:orbitbidar

# ನವಜೀವನ ಕಾರ್ಯಕ್ರಮ



## "ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯತ್ರಮ"

ದಿನಾಂಕ 12.09.2023 ರಂದು ಬಸವಕಲ್ಯಾಣ ತಾಲೂಕಿನ ಕೌಡಿಯಾಳ (ಆರ್) ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಶ್ರೀ ವಿಜಯಕುಮಾರ ಅವರು ಮಕ್ಕಳಿಗೆ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಮಾನಸಿಕ ಕಾಯಿಲೆಂದರೆನು? ಹಾಗೂ ಮಾನಸಿಕ ಕಾಯಿಲೆಯ ಲಕ್ಷಣಗಳು ಮತ್ತು ಆರೋಗ್ಯ ಕುರಿತು ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ 86 ಶಾಲೆಯ ಮಕ್ಕಳು ಮತ್ತು ಶಾಲಾ ಸಿಬಂಧಿಯವರು ಭಾಗವಹಿಸಿದರು.

ಚಿತಗುಪ್ಪಾ ತಾಲೂಕಿನ ತಾಳಮಡಗಿ ಗ್ರಾಮದಲ್ಲಿ ಸಪ್ಟೆಂಬರ್ 15.2023 ರಂದು ಮಹಿಳಾ ಸ್ವ–ಸಹಾಯ ಸಂಘದ 20 ಜನ ಸದಸ್ಯರಿಗೆ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ಮಾಡಲಾಯಿತು. ಶ್ರೀ ಅರುಣಕುಮಾರ ರವರು ಮಾನಸಿಕ ಆರೋಗ್ಯ ಎಂದರೆನು? ಮಾನಸಿಕ ಕಾಯಿಲೆ ಎಂದರೆನು? ಮಾನಸಿಕ ಕಾಯಿಲೆಯ ಲಕ್ಷಣಗಳ ಕುರಿತು ಮಾಹಿತಿ ನೀಡಲಾಯಿತು.





## "ವಿಶೇಷ ವಿಕಲ ಚೇತನರ ಸಭೆ"

ಸಪ್ಟೆಂಬರ್ 12 2023 ರಂದು ಹುಮನಾಬಾದ್ ತಾಲೂಕಿನ ದುಬಲಗುಂಡಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ಅವರು ಮಾನಸಿಕ ಅಸ್ವಸ್ಥರ ಪುನರ್ ವಸತಿ ಕಾರ್ಯಕ್ರಮದ ಅಡಿಯಲ್ಲಿ ವಿಶೇಷ ವಿಕಲ ಚೇತನರ ಸಂಘವು ರಚಿಸಲಾಯಿತು. ಈ ಸಂಘದಲ್ಲಿ ಒಟ್ಟು 8 ಜನರು ಕುಡಿಕೊಂಡು ಅದ್ಯಕ್ಷರು ಮತ್ತು ಕಾರ್ಯದರ್ಶಿಯನ್ನು ನೇಮಿಸಿ ಸಂಘಕ್ಕೆ ಶ್ರೀ ರೇವಣಸದ್ದೇಶ್ವರ ವಿಶೇಷ ವಿಕಲ ಚೇತನರ ಸಂಘ ಎಂದು ಹೆಸರು ಕೊಟ್ಟಿದ್ದರು.

## "ಸಿಬ್ಬಂದಿ ಬಲವರ್ಧನೆ ತರಬೇತಿ"

ದಿನಾಂಕ 21 ಸಪ್ಟೆಂಬರ್ 2023 ರಂದು ಹುಮನಾಬಾದ್ ಪಟ್ಟಣದ ಆರ್ಬಿಟ್ ಸಂಸ್ಥೆಯ ಆವರಣದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತಾಶ್ರಯದಲ್ಲಿ ಒಂದು ದಿನದ ಸಿಬ್ಬಂದಿ ಬಲವರ್ಧನೆ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸಂತೋಷ್ ಎ.ಪಿ.ಡಿ ಅವರು ಮಾನಸಿಕ ಅಸ್ವಸ್ಥತೆಯ ಕುರಿತು ತರಬೇತಿಯನ್ನು ನೀಡಿದರು. ಈ ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆ ಸಹ ನಿರ್ದೇಶಕರು ಹಾಗೂ ನವಜೀವನ ಕಾರ್ಯಕ್ರಮದ 10 ಜನ ಸಿಬ್ಬಂದಿ ವರ್ಗದವರು ಭಾಗವಹಿಸಿದರು.



## “ಕ್ಷೇತ್ರ ಆಧಾರಿತ ತರಬೇತಿ”



ದಿನಾಂಕ 29 ಸಪ್ಟೆಂಬರ್ 2023 ರಂದು ಹುಮನಾಬಾದ ತಾಲೂಕಿನ ಸಕ್ಕರಗಂಜ್ ವಾಡಿ ಮತ್ತು ಸೀತಾಳಗೆರಾ ಗ್ರಾಮದಲ್ಲಿ ಕ್ಷೇತ್ರ ಆಧಾರಿತ ತರಬೇತಿ ನಡೆಸಲಾಯಿತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸಂತೋಷ್ ಎ.ಪಿ.ಡಿ ಸಂಸ್ಥೆ ಇವರು ಆಗಮಿಸಿ 05 ಜನರ ಮಾನಸಿಕ ಅಸ್ವಸ್ಥರ ಮನೆ ಭೇಟಿ ಮಾಡಿ ಆರೋಗ್ಯದ ಬಗ್ಗೆ ವಿಚಾರಿಸಿ ಮಾತ್ರೆಗಳನ್ನು ಪರೀಕ್ಷಿಸಿ ಸರಿಯಾದ ಸಮಯದಲ್ಲಿ ತೆಗೆದುಕೊಳ್ಳಲು ಸಲಹೆ ನೀಡಿದರು. ಈ ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರು ಹಾಗೂ ದೀಪಿಕಾ ಪಡುಕೋಣ ಫೌಂಡೇಶನ್ ಸಿಬ್ಬಂದಿ ವರ್ಗದವರು ಭಾಗವಹಿಸಿದರು.



“



## ಷೇರುದಾರರ ತರಬೇತಿ”

ಸಪ್ಟೆಂಬರ್ 26.2023 ರಂದು ಚಿತಗುಪ್ಪಾ ತಾಲೂಕಿನ ತಾಳಮಡಗಿ “ಪ್ರಾಥಮಿಕ ಆರೋಗ್ಯ ಕೇಂದ್ರ” ದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತಾಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಪುನರ್ ವಸತಿ ಕಾರ್ಯಕ್ರಮದ ಅಡಿಯಲ್ಲಿ ಅಂಗನವಾಡಿ ಕಾರ್ಯಕರ್ತರಿಗೆ ಷೇರುದಾರರ ತರಬೇತಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ನವಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಪ್ರವೀಣ ಅವರು ಮಾನಸಿಕ ರೋಗದ ಲಕ್ಷಣಗಳು ಅದರಿಂದಾಗುವ ದುಷ್ಪರಿಣಾಮಗಳ ಕುರಿತು ವಿವರಿಸುತ್ತಾ, ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ನೀಡಲಾಗುತ್ತದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 40 ಅಂಗನವಾಡಿ ಕಾರ್ಯಕರ್ತೆಯರು, ಮೇಲ್ವಿಚಾರಕಿಯಾದ ಅಶ್ವಿನಿ ಮೇಡಂ ಹಾಗೂ ಆಪ್ತಸಮಾಲೋಚಕರಾದ ಅರುಣ ಕೋಟಿ ಮತ್ತು ಅರುಣಕುಮಾರ ಅವರು ಉಪಸ್ಥಿತರಿದ್ದರು.





# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

## "ಬೆಳವಣಿಗೆಯಲ್ಲಿ ಕುಂಟಿತವಿರುವ ಮಕ್ಕಳಿಗೆ ಸ್ಕ್ರೀನಿಂಗ್ ಮತ್ತು ಚಟುವಟಿಕೆ"




ಸಪ್ಟೆಂಬರ್ 12.2023 ರಂದು ಹುಮನಾಬಾದ ತಾಲೂಕಿನ ವಾಂಜ್ರಿ ಗ್ರಾಮದ ಅಂಗನವಾಡಿ ಕೇಂದ್ರ–02 ರಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು 25 ಮಕ್ಕಳಿಗೆ ಸ್ಕ್ರೀನಿಂಗ್ ಮಾಡಿಸಿದ್ದಾರೆ. 4 ಮಕ್ಕಳಿಗೆ ಸೇರೆಬ್ರಲ್ ಪಾಲ್ಸಿ ಹಾಗೂ ಸ್ಪೀಚ್ ಥೇರಫಿ ಹೇಳಿಕೊಟ್ಟಿದ್ದಾರೆ. ಪ್ರತಿ ತಿಂಗಳು ಚಟುವಟಿಕೆ ಮಾಡಿಸುವುದರ ಮೂಲಕ ಮಕ್ಕಳಲ್ಲಿ ಬದಲಾವಣೆ ತಂದಿದಾರೆ. ಮಕ್ಕಳ ಪೋಷಕರು ಆರ್ಬಿಟ್ ಸೋಸ್ಥೆಯು ನಮ್ಮ ಮಕ್ಕಳಿಗೆ ದಾರಿ ದೀಪವಾಗಿದ್ದಾರೆ ಎಂದು ತುಂಬ ಸಂತೋಷ ಪಟ್ಟು ಧನ್ಯವಾದಗಳು ತಿಳಿಸಿದರು.



## "ಸಂವಿಧಾನ ಪಠಣ ದೇಶಕ್ಕೆ ಮಾದರಿ ನಡೆ"



15 ಸಪ್ಟೆಂಬರ್ 2023 ರಂದು ಹುಮನಾಬಾದ್ ತಾಲೂಕಿನ ಓತಗಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ ರವರು ಸಂವಿಧಾನದ ಪೀಠಿಕೆ ಪಠಣವನ್ನು ಮಾಡಿಸಿದರು. ರಾಜ್ಯದ ಶಾಲಾ ಕಾಲೇಜುಗಳಲ್ಲಿ ತರಗತಿಗಳು ಆರಂಭ ವಾಗುವದುಕಿಂತ ಮುಂಚೆ ಸಂವಿಧಾನದ ಪಿಠಿಕೆ ಓದುವದನ್ನು ಕಡ್ಡಾಯ ಎಂದು ತಿಳಿಸಿದರು. ಕಾನೂನು ಹಾಗು ಆಡಳಿತ ವ್ಯವಸ್ಥೆಯ ಬಗ್ಗೆ ಅರಿವು ಮುಡಿಸಿದರು. ದೇಶದ 144 ಕೋಟಿ ಜನರ ಹಕ್ಕನ್ನು ರಕ್ಷಿಸುವಲ್ಲಿ ಮಹತ್ವ ಪೂರ್ಣವಾದ ನಮ್ಮ ಪ್ರಜಾಪ್ರಭುತ್ವ ಗ್ರಂಥವಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 50 ಮಕ್ಕಳು ಶಾಲಾ ಮುಖ್ಯಗುರುಗಳು ಹಾಗು ಸಿಬ್ಬಂದಿ ವರ್ಗದವರು ಭಾಗವಹಿಸಿ ಪ್ರಜಾಪ್ರಭುತ್ವದ ಮಹತ್ವ ಕುರಿತು ತಿಳಿದುಕೊಂಡರು.

## "ಪೋಷನ ಮಹಾಶಾಸನ ಕಾರ್ಯಕ್ರಮ"



ಹುಮನಾಬಾದ ತಾಲೂಕಿನ ಹುಡಗಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಅಡಿಯಲ್ಲಿ ಪೌಷ್ಟಿಕ ಆಹಾರ ಶಬಿರವನ್ನು ಸೆಪ್ಟೆಂಬರ್ 15 ರಂದು ಹಮ್ಮಿಕೊಳ್ಳಲಾಗಿತ್ತು. ಅಂಗನವಾಡಿ ಕೇಂದ್ರಗಳ ಮೇಲ್ವಿಚಾರಕಿಯಾದ ದೈವತಾ ರವರು ಮಾತನಾಡುತ ಮುಖ್ಯವಾಗಿ ಗರ್ಬಿಣಿಯರು, ಬಾಣಂತಿಯರು, ಶಿಶುವಿನ ಭೇಳವಣಿಗೆ ಕುಂಠಿತ ಹೊಂದಿದ ಮಕ್ಕಳು, ರಕ್ತ ಹೀನತೆ ಕಡಿಮೆ ತೂಕದ ಶಿಶು ಸೇರಿದಂತೆ ಅಪೌಷ್ಟಿಕತೆ ಸಮಸ್ಸೆಯಿಂದ ಬಳಲುತ್ತಿರುವವರು ಉತ್ತಮ ಆರೋಗ್ಯಕಾಗಿ ಮಕ್ಕಳ ಕಲ್ಯಾಣ ಇಲಾಖೆ ನಾನಾ ರೀತಿಯ ಯೋಜನೆಗಳನ್ನು ಜಾರಿಗೆ ಗೊಳ್ಳಿಸಿದೆ. ಇದರ ಪ್ರಯೋಜನ ತೆಗೆದುಕೊಳ್ಳಬೇಕೆಂದು ತಿಳಿಸಿದರು. ಈ ಸಭೆಯಲ್ಲಿ ಒಟ್ಟು 106 ಜನರು ಭಾಗವಹಿಸಿದರು.



# ಮಹಿಳಾಭಿವೃದ್ಧಿ ಕಾರ್ಯಕ್ರಮ

## "ಲಿಂಗ ಸಮಾನತೆ ತರಬೇತಿ"




ಚಿತಗುಪ್ಪಾ ತಾಲೂಕಿನ ತಾಳಮಡಗಿ ಗ್ರಾಮದಲ್ಲಿ ಶಾರಂಬಿ ಮತ್ತು ಗುಲಾಬಿ ಮಾಹಾ ಸಂಘದ 20 ಜನ ಸದಸ್ಯರಿಗೆ ಸೆಪ್ಟೆಂಬರ್ 15. 2023 ರಂದು ಲಿಂಗ ಸಮಾನತೆ ತರಬೇತಿ ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣದ ಕಾರ್ಯಕರ್ತೆಯಾದ ಶ್ರೀಮತಿ ಅಮೀತಾ ಉಪಸ್ಥಿತರಿದ್ದರು. ಸಂಪನ್ಮೂಲ ವೆಕ್ತಿಗಳಾದ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣಕುಮಾರ ರವರು ಮಾತನಾಡುತ ಲಿಂಗ ಮತ್ತು ಲಿಂಗತ್ವಕ್ಕೆ ಇರುವ ವ್ಯತ್ಯಾಸ ಕುರಿತು ಅರಿವು ಮೂಡಿಸಿದರು. ಗಂಡು ಹೆಣ್ಣು ಎಂಬ ಭೇದ ಭಾವ ಮಾಡದೆ ಎಲ್ಲರಿಗೂ ಸಮಾನ ಶಕ್ಷಣವನ್ನು ಕೊಡಿಸುವಂತ್ತೆ ಪ್ರೇರಣೆ ನೀಡಿದರು.



ಸೆಪ್ಟೆಂಬರ್ 20.2023 ರಂದು ಹಾಲಹಿಪ್ಪರಗಾ ಗ್ರಾಮದಲ್ಲಿ 6 ಸ್ವ-ಸಹಾಯ ಸಂಘದಿಂದ 40 ಮಹಿಳೆಯರಿಗೆ ಒಟ್ಟುಗೂಡಿಸಿ "ಲಿಂಗ ಸಮಾನತೆ ತರಬೇತಿ" ನೀಡಿದರು. ಸ್ಥಳಿಯ ಸಂಯೋಜಕರಾದ ಸಿಸ್ಟರ್ ಜೀವಲತಾ ಅವರು ಮಾತನಾಡುತ ಶಾಲಾ ಮಕ್ಕಳಿಗೆ ಸಮಾನ ಶಿಕ್ಷಣ ಸಮಾನ ವೇತನ, ಗಂಡು ಹೆಣ್ಣು ಎಂಬ ತಾರತಮ್ಯ ಇಲ್ಲದೆ ಮೌಲ್ಯದಾರಿತ ಮತ್ತು ಗುಣಮಟ್ಟದ ಬದುಕನ್ನು ರೂಪಿಸಿಕೊಳ್ಳಲು ಹಾಗೂ ಹಲವಾರು ವಿಷಯಗಳ ಬಗ್ಗೆ ತಿಳಿ ಹೇಳಿದರು.

## "ಮಹಾಸಂಘ ಬಲವರ್ಧನೆ ತರಬೇತಿ"



ಸೆಪ್ಟೆಂಬರ್ 22. 2023 ರಂದು ಭಾಲ್ಕಿ ತಾಲೂಕಿನ ದಾಡಗಿಯಲ್ಲಿ ಮಹಾಸಂಘ ಬಲವರ್ಧನೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕ್ಕೊಳಲಾಯಿತ್ತು. ಆರ್ಬಿಟ್ ಸಂಸ್ಥೆಯ ಮಹಿಳಾ ಅಭಿವೃದ್ಧಿ ಕಾರ್ಯಕ್ರಮದ ಕಾರ್ಯಕರ್ತೆಯಾದ ಸಿಸ್ಟರ್ ಜೀವಲತಾ ರವರು ಮಹಾಸಂಘ ಬಲವರ್ಧನೆ ಮತ್ತು ಸಂಘ ನೊಂದಾವಣೆ ಬಗ್ಗೆ ಮಾಹಿತಿ ನೀಡಿದರು. ಮಹಾಸಂಘ ರಚಿಸಿ ಎಲ್ಲಾರು ಜೊತೆಗೂಡಿ ಗ್ರಾಮದ ಹಲವಾರು ಸಮಸ್ಯೆಗಳನ್ನು ಗುರುತಿಸಿ ಸರಕಾರದಿಂದ ಲಭ್ಯವಿರುವ ಸೌಲಭ್ಯಗಳನ್ನು ಹಾಗೂ ಹಕ್ಕುಗಳನ್ನು ಪಡೆಯಲು ಶ್ರಮಿಸಿದರೆ ನಿಮ್ಮ ಗ್ರಾಮವು ಅಭೀವೃದ್ದಿಯಾಗುವುದು ಎಂದು ಹೇಳಿದರು.

## "ಸಂವಿಧಾನದ ಮೂಲಭೂತ ಹಕ್ಕುಗಳು ತರಬೇತಿ"



ಸೆಪ್ಟೆಂಬರ್ 15. 2023 ರಂದು ಪ್ರಜಾ ಪ್ರಭುತ್ವ ದಿನಾಚಾರಣೆ ಅಂಗವಾಗಿ ಕೌಡಿಯಾಳ ಗ್ರಾಮದಲ್ಲಿ ಮಹಿಳಾ ಸಬಲೀಕರಣ ಕಾರ್ಯಯೋಜನೆಯ ಅಡಿಯಲ್ಲಿ ಸೂರ್ಯೋದಯ ಮತ್ತು ರಾಧಿಕ ಸ್ವ-ಸಹಾಯ ಸಂಘದ 19 ಮಹಿಳೆಯರಿಗೆ ಸಂವಿಧಾನದ ಮೂಲಭೂತ ಹಕ್ಕುಗಳ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವಕ್ತಿಗಳಾಗಿ ಸರಕಾರಿ ಹಿರಿಯ ಪ್ರಥಮಿಕ ಶಾಲೆಯ ಸಹ ಶಿಕ್ಷಕಿ ಶ್ರೀಮತಿ ಸುನೀತಾ ರವರು ಆಗಮಿಸಿದರು. ಎಲ್ಲರೂ ಸಂವಿಧಾನ ಪೀಠಿಕೆ ಪ್ರಮಾಣ ವಚನವನ್ನು ಮಾಡಲಾಯಿತು. ಸಂವಿಧಾನದ ಮೂಲಭೂತ ಹಕ್ಕುಗಳ ಬಗ್ಗೆ ಹಾಗೂ ದೇಶದ ಐಕ್ಯತೆ ಬಗ್ಗೆ ಮಾಹಿತಿಯನ್ನು ನೀಡಿ ಎಲ್ಲರಲ್ಲೂ ಭಾತೃತ್ವ ಭಾವನೆ ಮೂಡಿಸಲಾಯಿತು.

## “ಪಂಚಾಯತ್ ರಾಜ್”




ಸಪ್ಟೆಂಬರ್ 21, 22, ರಂದು ಬಿ.ಡಿ.ಡಿ.ಎಸ್ ಬಳ್ಳಾರಿಯಲ್ಲಿ ಕ್ರಾಸ್ ಸಂಸ್ಥೆಯಿಂದ ಆಯೋಜಿಸಲಾದ “ಪಂಚಾಯತ್ ರಾಜ್” ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿ ಶ್ರೀಯುತ ವರ್ಗಿಸ್ ಕ್ರಾಸ್ ಸಂಸ್ಥೆ ಬೆಂಗಳೂರ ಇವರು ವಾರ್ಡ್ ಸಭೆ, ಗ್ರಾಮ ಸಭೆ ಮತ್ತು ಜಮಾಬಂಧಿ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದರು. ಇದರಲ್ಲಿ ವಿಶೇಷವಾಗಿ ಮಹಿಳೆಯರ ಪಾತ್ರ ಮತ್ತು ಜವಾಬ್ದಾರಿಯ ಬಗ್ಗೆ ಮನವರಿಕೆ ಮಾಡಿಸಿದರು. ಈ ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆಯ ವತಿಯಿಂದ ಮಹಾಸಂಘದ 10 ಪದಾಧಿಕಾರಿಗಳು, ಸಂಯೋಜಕರು ಹಾಗೂ ಕಾರ್ಯಕರ್ತರು ಸೇರಿ 12 ಜನ ಭಾಗವಹಿಸಿದರು.









## “ಆರೋಗ್ಯವೇ ಭಾಗ್ಯ”

ಹುಮನಾಬಾದ ತಾಲೂಕಿನ ಹುಡಗಿ ಗ್ರಾಮದಲ್ಲಿ ಸಪ್ಟೆಂಬರ್ 22.2023 ರಂದು ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆಯಾದ ಸಬೀತಾ ಹಾಗೂ ಆಯುರ್ವೇದಿಕ ಆಸ್ಪತ್ರೆ ಅವರ ನೈತೃತ್ವದಲ್ಲಿ ಆರೋಗ್ಯ ತಪಾಸಣೆ ಹಮ್ಮಿಕೊಳ್ಳಲಾಯಿತು. ಡಾ// ಮೇನಕ ರವರು ಮಾತನಾಡಿ ಮಾನುಷ್ಯರ ದೆಹಕ್ಕೆ ಯಾವಗಳಿಗೆಯಲ್ಲಿ ರೋಗ ಬರುತದೆ ಎಂಬುದು ತೀಳಿಯದು. ಇತ್ತಿಚ್ಚಿನ ದಿನಗಳಲ್ಲಿ ಬಿ.ಪಿ, ಸೂಗರ್ ಕಾಯಿಲೆಯಿಂದ ಬಹಳ ಜನರು ಬಳಲುತಿದ್ದಾರೆ. ಮತ್ತು ಚಿಂತೆ ಎಂಬುದು ಅನೇಕ ರೋಗಗಳಿಗೆ ಮುಖ್ಯ ಕಾರಣವಾಗಿದೆ. ಆದ್ದರಿಂದ ಚಿಂತೆಯನ್ನು ಬಿಟ್ಟು ಯೋಗ ಮಾಡುವುದು, ಗಿಡಮೂಲಿಕೆ ಔಷಧಿ ಸೇವನೆ ಮಾಡುವುದರ ಮೂಲಕ ಮಾನುಷ್ಯರ ದೆಹದ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಹೇಳಿದರು. ಸ್ವ–ಸಹಾಯ ಸಂಘದ ಸದಸ್ಯರಿಗು ಹಾಗೂ ಗ್ರಾಮಸ್ಥರಿಗು ಬಿ.ಪಿ ಶೂಗರ್ ತಪಾಸಣೆ ಮಾಡಿದರು. ಒಟ್ಟು 36 ಜನರು ಈ ಶಿಬಿರದ ಸದುಪಯೊಗವನ್ನು ಪಡೆದುಕೊಂಡರು.

# "ಉಚಿತ ಆರೋಗ್ಯ ತಪಾಸಣಾ ಶಿಬಿರ"



ಹುಮನಾಬಾದ ತಾಲೂಕಿನ ನಂದಗಾಂವ ಗ್ರಾಮ ಪಂಚಾಯತ ಅವರಣದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಸಂಯುಕ್ತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿತವನ್ನು ನಡೆಸಲಾಯಿತು. ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ರವರು ಮಾತನಾಡುತ ಆರ್ಬಿಟ್ ಸಂಸ್ಥೆಯು "ಜನರ ಸೇವೆಯೇ ದೇಶದ ಸೇವೆ, ಸಮುದಾಯದ ಸೇವೆಯೇ ದೇವರ ಸೇವೆ" ಎಂಬ ಕಾರ್ಯತತ್ವವನ್ನು ಅನುಸರಿಸಿ ನಡೆಯುತಿರುವ ಸಂಸ್ಥೆ, ಈ ಆರೋಗ್ಯ ತಪಾಸಣೆ ಶಿಬಿರದ ಸದುಪಯೋಗವನ್ನು ಗ್ರಾಮದ ಜನರು ಹೆಚ್ಚಿನ ಪ್ರಮಾಣದಲ್ಲಿ ಪಡೆದುಕೊಳ್ಳಬೇಕು ಎಂದು ಹೇಳಿದರು. ಕ್ಯಾನ್ಸರ್ ತಜ್ಞರಾದ ಜವೆರಿಯ ಫಾತಿಮಾ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಸರುಪಯೋಗ ಪಡೆದುಕೊಳ್ಳಿ ಎಂದು ಹೇಳಿದರು. ಗ್ರಾಮ ಪಂಚಾಯತ ಅಧ್ಯಕ್ಷರಾದ ಶ್ರೀ ರವೀಂದ್ರ ರಾಂಪುರ್ ರವರು ಆರ್ಬಿಟ್ ಸಂಸ್ಥೆಯು ಬೀದರ್ ಜಿಲ್ಲೆಯಾದ್ಯಂತ ಹಲವಾರು ವರ್ಷಗಳಿಂದ ಸಮಾಯ ಸೇವೆಯಲ್ಲಿ ತೋಡಗಿದ್ದು ಉತ್ತಮ ಸೇವೆ ನೀಡುತ್ತಿದೆ ಎಂದು ಹೇಳಿದರು. ಈ ಶಿಬಿರದಲ್ಲಿ ನಂದಗಾಂವ ಗ್ರಾಮ ಪಂಚಾಯತ ಆಡಳಿತ ವರ್ಗ, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ವೈದ್ಯಕೀಯ ತಂಡ, ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ಹಾಗೂ ಗ್ರಾಮಸ್ಥರು ಸೇರಿ 135 ಜನರು ಶಿಬಿರದ ಸದುಪಯೋಗವನ್ನು ಪಡೆದುಕೊಂಡದು.





# ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಕಾರ್ಯ

ಭಾರತ ವೈಭವ
Page (8)
05 Sep 2023
POWERED BY KHUSHI HOST

## ಆರ್ಬಿಟ್ ಸಂಸ್ಥೆಯಲ್ಲಿ ಇಂದು ರಕ್ತದಾನ ಶಿಬಿರ

**ಹುಮನಾಬಾದ:** ಪಟ್ಟಣದ ಆರ್ಬಿಟ್ ಸಂಸ್ಥೆಯಲ್ಲಿ ಸಂತ ಪಾಲಕಿ ಮದರ್ ತೆರಸಾ ಅವರ ಸ್ಮರಣಾರ್ಥವಾಗಿ ಐಸಿವೈಎಂ ಮತ್ತು ಆರ್ಬಿಟ್ ಸಂಸ್ಥೆ ಹುಮನಾಬಾದ ಜಂಟಿಯಾಗಿ ಇಂದು ದಿನಾಂಕ 5–9–2023 ಮಂಗಳವಾರದಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ರಕ್ತದಾನ ಮಾಡುವ ಪ್ರತಿಯೊಬ್ಬ ದಾನಿಗಳಿಗೆ ಕಾರ್ಡ್ ನೀಡಲಾಗುತ್ತೆ ಕಾರ್ಡ್ ಪಡೆದುಕೊಂಡಿದವರಿಗೆ ತುರ್ತು ಸಂದರ್ಭದಲ್ಲಿ ಬೀದರ ಬ್ಲಡ್ ಬ್ಯಾಂಕಿನಿಂದ ಉಚಿತವಾಗಿ ರಕ್ತ ಪಡೆದುಕೊಳ್ಳಲು ಅನುಕೂಲವಾಗಲಿದೆ. ರಕ್ತದಾನ ಮಾಡಲು ಇಚ್ಛಿಸುವವರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ,ಫಾದರ್ ವಿಕ್ಟರ ವಾಸ್ ನಿರ್ದೇಶಕರು,ಆರ್ಬಿಟ್ ಸಂಸ್ಥೆ ಹುಮನಾಬಾದ. ಮೊಬೈಲ್ 8660968063 ಮತ್ತು ಫಾದರ್ ಸಚಿನ್ ನಿರ್ದೇಶಕರು,ಐಸಿವೈಎಂ ಗುಲ್ಬರ್ಗ. ಮೊಬೈಲ್ 9743425461.

## ಆರ್ಬಿಟ್ ಸಂಸ್ಥೆಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ



ಮಲ್ಲಮ್ಮ ನುಡಿ ವಾರ್ತೆ
(ಸತೀಷಕುಮಾರ ತುಪ್ಪದ)

ಬೀದರ ಸೆ.09: ಆರ್ಬಿಟ್ ಸಂಸ್ಥೆಯು ಜನರ ಸೇವೆಯೇ ದೇಶದ ಸೇವೆ,ಸಮುದಾಯದ ಸೇವೆಯೇ ದೇವರ ಸೇವೆ ಎಂಬ ಕಾರ್ಯತತ್ವವನ್ನು ಅನುಸರಿಸಿ ನಡೆಯುತ್ತಿರುವ ಸಂಸ್ಥೆ. ಈ ಆರೋಗ್ಯ ತಪಾಸಣಾ ಶಿಬಿರದ ಸದುಪಯೋಗ ಗ್ರಾಮದ ಜನರು ಹೆಚ್ಚಿನ ಪ್ರಮಾಣದಲ್ಲಿ ಪಡೆಯುವಂತೆ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ನುಡಿದರು.

ನಂದಗಾವ್ ಗ್ರಾಮದ ಪಂಚಾಯತ್ ಆವರಣದಲ್ಲಿ ಆಯೋಜಿಸಿದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆರ್ಬಿಟ್ ಸಂಸ್ಥೆ, ಗ್ರಾಮ ಪಂಚಾಯತ್ ನಂದಗಾವ್ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಸಂಯುಕ್ತ ಆಶಯದಲ್ಲಿ ನಡೆಸಲಾಯಿತು.

ಕ್ಯಾನ್ಸರ್ ತಜ್ಞರಾದ ಡಾಕ್ಟರ್ ಜವೆರಿಯ ಫಾತಿಮಾ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತಾ, ಈ ಶಿಬಿರದಲ್ಲಿ ವಿಶೇಷವಾಗಿ ಗರ್ಭಕೋಶ ಕ್ಯಾನ್ಸರ್, ಬಾಯಿ ಕ್ಯಾನ್ಸರ್ ಮತ್ತು ಸ್ತನ ಕ್ಯಾನ್ಸರ್ ಪರೀಕ್ಷೆ ಮಾಡಲಾಗುವುದು. ಆದ್ದರಿಂದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಸದುಪಯೋಗ ಪಡೆಯುವಂತೆ ಸಲಹೆ ನೀಡಿದರು.

ನಂದಗಾವ್ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀ ರವೀಂದ್ರ ರಾಂಪುರ ಮಾತನಾಡುತ್ತಾ, ಆರ್ಬಿಟ್ ಸಂಸ್ಥೆ ಬೀದರ್ ಜಿಲ್ಲೆಯಾದ್ಯಂತ ಹಲವಾರು ವರ್ಷಗಳಿಂದ ಸಮಾಜ ಸೇವೆಯಲ್ಲಿ ತೊಡಗಿದ್ದು ಉತ್ತಮ ಸೇವೆ ನೀಡುತ್ತಿದೆ ಎಂದು ತಿಳಿಸುತ್ತಾ ಗ್ರಾಮದ ಜನರು ಈ ಶಿಬಿರದ ಸದುಪಯೋಗ ಪಡೆಯುವಂತೆ ತಿಳಿಸಿದರು.

ಈ ಶಿಬಿರದಲ್ಲಿ ಒಟ್ಟು 135 ಜನರ ಭಾಗವಹಿಸಿ ಶಿಬಿರದ ಸದುಪಯೋಗ ಪಡೆದುಕೊಂಡರು.

ಶ್ರೀಮತಿ ಮಹಾದೇವಿ ಪ್ರಾರ್ಥಿಸಿ, ಹನುಮಂತ್ ನಂದಗಾವ್ಕರ್ ಸ್ವಾಗತಿಸಿ, ಅರುಣ್ ಕುಮಾರ್ ಕೋಟೆ ವಂದಿಸಿ, ಅರುಣ್ ಕುಮಾರ್ ಕಣಜಿ ನಿರೂಪಿಸಿದರು.

ನಂದಗಾವ್ ಗ್ರಾಮ ಪಂಚಾಯತಿಯ ಆಡಳಿತ ವರ್ಗ, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ವೈದ್ಯಕೀಯ ತಂಡ, ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ಹಾಗೂ ಗ್ರಾಮದ ಜನರು ಭಾಗವಹಿಸಿದರು.

## ಆರ್ಬಿಟ್ ಸಂಸ್ಥೆಯಲ್ಲಿ ರಕ್ತದಾನ ಶಿಬಿರ





ರಕ್ತಮಣಿ " ಆರ್ಬಿಟ್ ಸಂಸ್ಥೆ ಹುಮನಾಬಾದನಲ್ಲಿ ಆಯೋಜಿಸಿರುವ ರಕ್ತದಾನ ಶಿಬಿರದಲ್ಲಿ ಐವತ್ತನೆ ಸಲ ರಕ್ತದಾನ ಮಾಡಿದ ಉಜನಿ ಧರ್ಮ ಸಂಸ್ಥೆಯ ಫಾದರ್ ಸುನಿಲ ಅವರಿಗೆ ಡಾ ನಾಗನಾಥ ಹುಲಸೂರೆ ಮತ್ತು ಫಾದರ್ ವಿಕ್ಟರ್ ಅಭಿನಂದಿಸಿ ಸನ್ಮಾನಿಸಿ ಗೌರವಿಸಿದರು. ಜಿಲ್ಲಾ ರಕ್ತ ಘಟಕದ ವೈದ್ಯಾಧಿಕಾರಿ ಮಲ್ಲಣ್ಣ ಪಾಟೀಲ, ಗಂಗಾಧರ, ಫಾ. ಸಚಿನ್, ಫಾ.ವಿಜಯಕುಮಾರ, ನಿರ್ಮಲಾ, ಅಮಿತಾ, ರವಿ, ಗೀತಾರೆಡ್ಡಿ, ಶೃತಿ, ಶಿವಕುಮಾರ ಕಿವಡೆ ಸೇರಿದಂತೆ ಇತರರು ಇದ್ದರು.



ಹುಮನಾಬಾದ್‌ನ ಆರ್ಬಿಟ್ ಸಂಸ್ಥೆಯಲ್ಲಿ ಮಂಗಳವಾರ ಏರ್ಪಡಿಸಿದ್ದ ರಕ್ತದಾನ ಶಿಬಿರವನ್ನು ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ್ ಉದ್ಘಾಟಿಸಿದರು. ಫಾದರ್ ಸ್ಟ್ಯಾನಿ ಲೋಬೊ, ಮಲ್ಲಣ್ಣ ಪಾಟೀಲ್, ಗಂಗಾಧರ, ಫಾ.ಸಚಿನ್, ಗಿರೀಶ ತುಂಬಾ, ನಾಗಭೂಷಣ ಸಂಗಮಕರ್ ಇತರರಿದ್ದರು.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮ

### ಆರೋಗ್ಯವೆ ಭಾಗ್ಯ



ಕಲಬುರಗಿ ತಾಲ್ಲೂಕಿನ ಸುತ್ತಮುತ್ತ ಗ್ರಾಮಗಳಾದ ಸಿತನೂರ್, ಪರ್ತಬಾದ, ಸಾವಳಗಿ, ಗ್ರಾಮಗಳಲ್ಲಿ ಮತ್ತು ಶಾಲೆಗಳಲ್ಲಿ, ಸೆಪ್ಟೆಂಬರ ತಿಂಗಳ ಸ್ಪರ್ಶ ಕಾರ್ಯಕ್ರಮ ನಡೆತಿತು, ಕಾರ್ಯಕ್ರಮದಲ್ಲಿ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲಾಯಿತು. 'ಸ್ಪರ್ಶ' ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ಸ್ವಾತಿ ರವರು ಕ್ಯಾನ್ಸರ್‌ನ ರೋಗ ಲಕ್ಷಣಗಳು, ಹಾಗೂ ಕ್ಯಾನ್ಸರ ತಡೆಗಟ್ಟುವ ವಿಧಾನ ಮತ್ತು ಕ್ಯಾನ್ಸರ್ ಮುಂಜಾಗೃತಿಯ ಕ್ರಮಗಳು ಹಾಗೂ ಕ್ಯಾನ್ಸರ ತಪಾಸಣೆ ಮಾಡಿಸಿಕೊಳ್ಳುವುದರಿಂದ ಆಗುವ ಲಾಭಗಳ ಬಗ್ಗೆ ತಿಳಿಸಿದರು. ಹಾಗೆಯೇ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಾವಯವ ಗೊಬ್ಬರದಿಂದ ಮನೆಯಲ್ಲೆ ಕೈತೋಟ ಮಾಡುವುದರ ಉಪಯೋಗದ ಬಗ್ಗೆ ಮಾಹಿತಿ ನೀಡಿದರು. ಹಾಗೂ ಕೈತೋಟ ಮಾಡುವಂತೆ ಸಲಹೆ ನೀಡಿದರು. ಇದೆ ಸಂದರ್ಭದಲ್ಲಿ ಕ್ಯಾನ್ಸರ್ ನಿಂದ ಬಳಲುತಿರುವ ಬಡ ಕುಟುಂಬದ ರೋಗಿಗಳಿಗೋಸ್ಕರ 273 ರೂಪಾಯಿ ದೇಣಿಗೆ ಸಂಗ್ರಹಣೆ ಮಾಡಲಾಯಿತ್ತು. ಈ ಎಲ್ಲಾ ಕಾರ್ಯಕ್ರಮದಲ್ಲಿ ಒಟ್ಟು 140 ಜನ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.








## ಉಜ್ಜೀವನ ಕಾರ್ಯಕ್ರಮ

## ರೈತರಿಗೆ ಬ್ಯಾಂಕ ಸೌಲ್ಯಭೆಗಳ ಬಗ್ಗೆ ಮಾಹಿತಿ

ಸಪ್ಟೆಂಬರ್ 26 ರಂದು ನಂದೂರ (ಕೆ) ಗ್ರಾಮಕ್ಕೆ ಹೋಗಿ. ರೈತರ ಹೊಲ ಭೇಟಿ ಮಾಡಿ ಅವರ ಸಮಸ್ಯೆಗಳ ಬಗ್ಗೆ ಗುರುತಿಸಿಕೊಂಡು. ನಂದೂರ ಕೆ ಗ್ರಾಮದಲ್ಲಿರುವ ಆಂಧ್ರ ಬ್ಯಾಂಕ್ ಮ್ಯಾನೇಜರ್ ಆಗಿರುವ ವಿಶ್ವನಾಥ್ ಸರ್ ಅವರಿಗೆ ಭೇಟಿ ನೀಡಿ. ರೈತರಿಗೆ ಸಿಗುವ ಸಬ್ಸಿಡಿ ಲೋನ್ ಮತ್ತು ಮಹಿಳಾ ಸ್ವ ಸಹಾಯ ಸಂಘಗಳಿಗೆ ಹಾಗೂ ಸ್ವ ಉದ್ಯೋಗ ಮಾಡುತ್ತಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆಯಲಾಯಿತು. ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಚಂದ್ರಕಾಂತ್ ಹಾಗೂ ಸಿಬ್ಬಂದಿಯಾದ ಇಂದು ಜವರೇಕಾರ್ ಅವರು ಉಪಸ್ಥಿತರಿದ್ದರು.



## "ನೈಸರ್ಗಿಕ ಕೃಷಿ ಪದ್ಧತಿ ಬಗ್ಗೆ ತರಬೇತಿ"




ಸೆಪ್ಟೆಂಬರ್ 12ರಿಂದ 14ರವರೆಗೆ ತೆಲಂಗಾಣ ರಾಜ್ಯದ ಮಾಂಚರಿಯಲ ಜಿಲ್ಲೆಯಲ್ಲಿ ಉಜ್ಜೀವನ ಮೂರನೇ ಹಂತದ ನೈಸರ್ಗಿಕ ಕೃಷಿಯ ಪದ್ಧತಿ ಮತ್ತು ಸಾವಯವ ಕೃಷಿ ಪದ್ಧತಿಗಳ ಬಗ್ಗೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ನಾಲ್ಕು ಸಂಸ್ಥೆ ಮತ್ತು ತೆಲಂಗಾಣ ರಾಜ್ಯದ ಮೂರು ಸಂಸ್ಥೆಗಳ ಮುಖ್ಯಸ್ಥರು ಮತ್ತು ಕಾರಿತಾಸ್ ಇಂಡಿಯಾದ ಎಲ್ಲಾ ಸಿಬ್ಬಂದಿ ವರ್ಗದವರು. ಮಂಚರಾಯಲ್ ನಿವೃತ್ತಿಯ ಬಿಷಪ್ ಗಳಾದ ಜೋಸೆಫ್ ಕುನಂತ ಹಾಗೂ ಸಂಸ್ಥೆಗಳ ನಿರ್ದೇಶಕರು ಸಂಯೋಜಕರು ಕರೆ 30 ಜನ ಭಾಗವಹಿಸಿ ತರಬೇತಿ ಪಡೆಯಲಾಯಿತು



## "ಅರ್ಧವಾರ್ಷಿಕ ಪರಿಶೀಲನ ಸಭೆ"

ದಿನಾಂಕ 12.09.2023ರಂದು ಕಲಬುರ್ಗಿ ಜಿಲ್ಲೆಯ ನಾಗನಹಳ್ಳಿ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯಿಂದ ಉಜ್ಜೀವನ ಯೋಜನೆಯ ಕಾರ್ಯಕರ್ತ ಶ್ರೀಮತಿ ನಂದಿನಿ ರವರು 17 ಜನ ರೈತರಿಗೆ ಅರ್ಧ ವಾರ್ಷಿಕ ಪರಿಶೀಲನ ಸಭೆ ಮಾಡಿ ಈ ಸಭೆಯಲ್ಲಿ ರೈತರಿಗೆ ರೈತ ಸಂಪರ್ಕದಿಂದ ಸಿಗುವ ಸೌಲಭ್ಯಗಳ ಬಗ್ಗೆ ಮತ್ತು ಸಾವಯವ ಕೃಷಿಯ ಬಗ್ಗೆ ಸಾವಯವ ಕೃಷಿಯಿಂದ ಆಗುವ ಲಾಭಾಂಶದ ಬಗ್ಗೆ ಹಾಗೂ ರಾಸಾಯನಿಕ ಗೊಬ್ಬರವನ್ನು ಕಡಿತಗೊಳಿಸಿ ಸಾವಯವ ಗೊಬ್ಬರವನ್ನು ಬಳಕೆ ಮಾಡುವುದರ ಕುರಿತು ರೈತರಿಗೆ ಮನವರಿಕೆ ಮಾಡಿದರು 17 ಜನರು ಭಾಗವಹಿಸಿ ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.



# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ




ಸೆಪ್ಟೆಂಬರ್ 24 ರಂದು ಕಲಬುರಗಿ ತಾಲ್ಲೂಕಿನಲ್ಲಿ ಬರುವ ಫರಹತಬಾದ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ "ಪೋಷಕರಿಗೆ ಸಾಮರ್ಥ್ಯ ನಿರ್ಮಾಣ ತರಬೇತಿ ಕಾರ್ಯಕ್ರಮವನ್ನು" ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ ಪ್ರೇಮಜಿ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮಕ್ಕೆ ಮುಖ್ಯಅತಿಥಿಗಳಾಗಿ ಶ್ರೀಮತಿ ಶರಣಮ್ಮ ಗಂಜಿ ಸ್ಟಾಫ್ ನರ್ಸ, ಪ್ರಾಥಮಿಕ ಆರೋಗ್ಯ ಕೇಂದ್ರ, ಫರಹತಾಬಾದ, ಹಾಗೂ ಶ್ರೀಮತಿ ಶ್ವೇತಾ ಕುಲಕರ್ಣಿ ವ್ಯವಸ್ಥಾಪಕರು, ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ, ಸೇವಾ ಸಂಗಮ ಸಂಸ್ಥೆ, ಕಲಬುರಗಿ, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಖಾಜಾ ಹುಸ್ನೆನ ಭೌತ ಶಾಸ್ತ್ರಜ್ಞರು ಸಾಖ್ಯ ಸಂಸ್ಥೆ, ಬೆಂಗಳೂರು, ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ತರಬೇತಿ ಕಾರ್ಯಕ್ರಮದಲ್ಲಿ ಶ್ರೀ ಖಾಜಾ ಹುಸ್ನೆನ ಅವರು ಪಾಲಕರಿಗೆ "ಬೆಳವಣಿಗೆಯಲ್ಲಿ ಕುಂಠಿತ ಇವರುವ ಮಕ್ಕಳಲ್ಲಿ ಕಂಡು ಬರುವ ನ್ಯೂನತೆಯ" ಕುರಿತು ಮಾಹಿತಿಯನ್ನು ನೀಡಿದರು. ತರಬೇತಿ ಕಾರ್ಯಗಾರದಲ್ಲಿ ಫರಹತಬಾದ ಹಾಗೂ ಹೊನ್ನಕಿರಣಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಒಳಪಡುವ ಒಟ್ಟು 24ಗ್ರಾಮಗಳಲ್ಲಿ 13 ಗ್ರಾಮಗಳಿಂದ ಪಾಲಕರು ಭಾಗವಹಿಸಿದರು.

## "ಮಕ್ಕಳಲ್ಲಿರುವ ನ್ಯೂನ್ಯತೆಯ ಬಗ್ಗೆ ಪುನರ್ ವಿಶ್ಲೇಷಣೆ"

ದಿನಾಂಕ: 23 ಸೆಪ್ಟೇಂಬರ್ ರಂದು ಕಲಬುರಗಿ ನಗರ ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಡೇಂಶನ ವತಿಯಿಂದ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದಡಿಯಲ್ಲಿ Re-Assessment ಹಮ್ಮೀಕೊಳ್ಳಲಾಯಿತು. 0–6 ವರ್ಷದೊಳಗಿನ ಮಕ್ಕಳ ಬೆಳವಣಿಗೆಯಲ್ಲಿ ಎಷ್ಟರ ಮಟ್ಟಿಗೆ ನ್ಯೂನ್ಯತೆಯಲ್ಲಿ ಸುಧಾರಣೆ ಹೊಂದಿದೆ ಎಂದು ಮಕ್ಕಳ ಪುನರ್ ವಿಶ್ಲೇಷಣೆ ಮಾಡಿದರು. ಮಕ್ಕಳಲ್ಲಿರುವ ನ್ಯೂನ್ಯತೆಯನ್ನು ಪರಿಶೀಲನೆ ಮಾಡಿ ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ನ್ಯೂನ್ಯತೆ ಕಡಿಮೆ ಮಾಡಲು ಗುರಿಯನ್ನು ನಿಗದಿಪಡಿಸಲಾಯಿತು. ಖಿಜ ೦ಛಿಟಜಟಿಣ ಮಾಡಿ ಆ ಮಕ್ಕಳಿಗೆ ಬೇಕಾದಂತಹ ಸಾಧನಾ ಸಲಕರಣೆಯನ್ನು ಕೊಟ್ಟು ಆ ಮಕ್ಕಳ ಬೆಳವಣಿಗೆ ಸುಧಾರಣೆ ಮಾಡುವಂತಹ ಕೆಲಸ ಸೇವಾ ಸಂಗಮ ಸಮಾಜ ಸಂಸ್ಥೆ ಒಂದು ಒಳ್ಳೆಯ ಕಾರ್ಯದಲ್ಲಿ ತೊಡಗಿದೆ. ಶ್ರೀ. ಖಾಜಾ ಹುಸೇನ್ ಸರ್ ಅವರು ಬೆಳವಣಿಗೆ ಕುಂಠಿತ ವಿರುವ ಮಕ್ಕಳು ಯಾವ ಹಂತದಲ್ಲಿದಾವೆ ಮತ್ತು ಅವರಿಗೆ ಯಾವ ಚಟುವಟಿಕೆ ಮಾಡುವುದರ ಮೂಲಕ ನ್ಯೂನ್ಯತೆ ಕಡಿಮೆ ಮಾಡಬಹುದೆಂದು ತಿಳಿಸಿದರು.



## "ಸದೃಡ ಆರೋಗ್ಯಕ್ಕೆ ಪೌಷ್ಠಿಕ ಆಹಾರ"




12 ಸೆಪ್ಟೇಂಬರ್ ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ವತಿಯಿಂದ ಸಾಬಿರ ಮಜಿದ ಏರಿಯಾದಲ್ಲಿ "ಆರೋಗ್ಯವೇ ಭಾಗ್ಯ " ಆರೋಗ್ಯವಂತ ವ್ಯಕ್ತಿ ದೇಶದ ಆಸ್ತಿ ಆರೋಗ್ಯದಿರದಿದರೆ ಐಶ್ವರ್ಯ, ಸೌಲಭ್ಯ, ಆಸ್ತಿ ಯಾವುದಕ್ಕೂ ಬೆಲೆ ಇರುವುದಿಲ್ಲ ನಾವು ಸರಿಯಾದ ಸಮಯಕ್ಕೆ ಪೌಷ್ಠಿಕ ಆಹಾರವನ್ನು ಸೇವಿಸುಬೇಕು. ವ್ಯಕ್ತಿ ಹುಟ್ಟಿನಿಂದ ಆರಂಭವಾಗಿ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲಿ ಪೌಷ್ಠಿಕ ಆಹಾರ ಅಗತ್ಯ ಆರೋಗ್ಯಕರ ಆಹಾರ ಪದ್ದತಿಯ ಮೂಲಕ ಅನೇಕ ಸಾಮಾನ್ಯ ಆರೋಗ್ಯ ಸಮಸ್ಯೆಗಳನ್ನು ಪಡೆಯಬಹುದು ಹಾಗಾಗಿ ಪೌಷ್ಠಿಕ ಆಹಾರ ಸೇವಿಸುವುದು ಮುಖ್ಯ ಎಂದು ಹಿರಾಪುರ ಸರ್ಕಲ್ ಪಿ.ಎಚ್.ಸಿ.ಓ ಅರ್ಚನಾ ಅವರು ಹೇಳಿದರು ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಬಗ್ಗೆ ಮಾಹಿತಿ ನೀಡಿದರು.

## "ಶ್ರೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಅರಿವು ಕಾರ್ಯಕ್ರಮ"



13 ಸೆಪ್ಟೇಂಬರ್ ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ವತಿಯಿಂದ ಭುವಿ ಗಲ್ಲಿಯಲ್ಲಿ ಶ್ರೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಅರಿವು ಕಾರ್ಯಕ್ರಮ ಆಯೋಜಿಸಲಾಗಿತ್ತು. ಒಂದು ಮಗು ನ್ಯೂನ್ಯತೆಗೆ ಒಳಗಾಗಲು ಏನೇನು ಕಾರಣ ಕಾರಣವಾಗಬಹುದು ಎಂದು ತಿಳಿಸಲಾಯಿತು. ನಂತರ ನ್ಯೂನ್ಯತೆಗೆ ಒಳಗಾದ ಮಕ್ಕಳಿಗೆ ನಮ್ಮ ಸೇವಾ ಸಂಗಮ ಸಂಸ್ಥೆ ವತಿಯಿಂದ ಯಾವ ಯಾವ ಸೌಲಭ್ಯ ನೀಡುತ್ತೇವೆಂದು ಮಾಹಿತಿ ನೀಡಲಾಯಿತು. ಮಕ್ಕಳು ನ್ಯೂನ್ಯತೆಯಿಂದ ಹೋರ ಬರಲು ಮಕ್ಕಳಿಗೆ ಯಾವ ರೀತಿಯ ಚಟುವಟಿಕೆಯನ್ನು ನೀಡುವುದು ಮತ್ತು ಮಗು ಬದಲಾವಣೆ .ಅದರ ಜೊತೆಗೆ ನಮ್ಮ ಸಂಸ್ಥೆ ವತಿಯಿಂದ ಪೌಷ್ಠಿಕ ಆಹಾರ ಕಿಟ್ ಕೋಡಲಾಗುತ್ತದೆ, ನಂತರ ಮಕ್ಕಳಿಗೆ ಸೀಗುವ ಸರ್ಕಾರದ ಸೌಲಭ್ಯಗಳನ್ನು ದೂರಕುವಂತೆ ಮಾಡುವುದು ಜೊತೆಗೆ ಸೇವಾ ಸಂಗಮ ಸಂಸ್ಥೆ ವತಿಯಿಂದ ಸಾಧನ ಸಲಕರಣೆಗಳನ್ನು ವಿತರಿಸಲಾಗುತ್ತದೆ ಎಂಧು ಮಾಹಿತಿ ನೀಡಲಾಯಿತು.

## "T.L.M ತರಬೇತಿ"

22 ಸೆಪ್ಟೇಂಬರ್ ರಂದು ಕಲಬುರಗಿ ತಾಲ್ಲೂಕಿನ ಸಾವಳಗಿ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ವತಿಯಿಂದ ಖಿ.ಐ.ಒ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶಿವಕಾಂತರವರು ಸಮಗ್ರವಾಗಿ ಹಾಗೂ ಪರಿಣಾಮಕಾರಿಯಾಗಿರಲು ಮನೆಯಲ್ಲಿರುವ ವಸ್ತುಗಳನ್ನು ಉಪಯೋಗಿಸಿಕೊಂಡು ಸ್ಪೀಚ್ ಥೇರಪಿಯನ್ನು , ಉದಿರುವುದರಿಂದ ಸಣ್ಣ ಸಣ್ಣ ಸ್ನಾಯುಗಳ ಬೆಳವಣಿಗೆ ಮತ್ತು ಮಕ್ಕಳಿಗೆ ಚಿತ್ರಕಲೆ ಮಾಡಿಸುವುದರಿಂದ ಬಣ್ಣಗಳ ಪರಿಚಯ, ದೈಹಿಕವಾಗಿ, ಸದೃಡತೆ ಹಾಗೂ ಬೌತಿಕ ಬೆಳವಣಿಗೆ ಕೂಡ ಆಗುತ್ತದೆ. ಇದರಿಂದ ಮಕ್ಕಳ ಸರ್ವೋತೋಮುಖ ಬೆಳವಣಿಗೆಗೆ ಸಹಾಯವಾಗುತ್ತದೆ, ಈ ತರಬೇತಿಯಲ್ಲಿ ಪಾಲಕರು ಮಕ್ಕಳು ಕಾಯ್ಕರ್ತರು ಮತ್ತು ಅಂಗನವಾಡಿ ಸಹಾಯಕಿ ಉಪಸ್ಥಿತರಿದ್ದು, ಒಟ್ಟರೆಯಾಗಿ 15 ಜನರು ಭಾಗವಹಿಸಿದರು.





19 ಸೆಪ್ಟೇಂಬರ್ ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ವತಿಯಿಂದ ಚನ್ನವೀವಿ ನಗರ ಬೆಳವಣಿಗೆ ಕುಂಠಿತವಿರುವ ಮಕ್ಕಳ ಮಾಹಿತಿ ಕಾಯ್ಕ್ತಮ ಹಮ್ಮಿಕೋಳ್ಳಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಮಕ್ಕಳೂ, ಪಾಲಕರು ಮತ್ತು ಅಂಗನವಾಡಿ ಕಾರ್ಯಕರ್ತರು ಉಪಸ್ಥಿತರಿದ್ದು. 0–6 ವರ್ಷದೊಳಗಿನ ಮಕ್ಕಳ ಬೆಳವಣಿಗೆ ಕುಂಠಿತವಿರುವ ಮಕ್ಕಳನ್ನು ಗುರುತಿಸಲಾಯಿತು, ಆ ಮಕ್ಕಳನ್ನು ವಿಶ್ಲೇಷಣೆ ಮಡಿ ಬೇಕಾದಂತಹ ಸಾಧನ ಸಲಕರಣೆ ನೀಡಿ ಮಕ್ಕಳಲ್ಲಿ ಸುಧಾರಣೆ ಮಾಡುವಂತಹ ಕೆಲಸ ಸೇವಾ ಸಂಗಮ ಸಂಸ್ಥೆ ಒಂದು ಒಳ್ಳೆಯ ಕಾರ್ಯದಲ್ಲಿ ತೋಡಗಿದೆ ಎಂದು ಹೇಳಬಹುದು.

# Organization of Bidar Integral Transformation (ORBIT)



# APPEAL

***Remove 'DIS' From DISABLE***

(Only for Indian citizens)

**Account Details :**
**Organization of Bidar Integral**
**Account Number: 3410101006386**
**IFSC: CNRB0003410**
**Branch: Humnabad**

**DONATE NOW**

**Donation Exempted U/S 80G of IT Act 1961**

## *Sponsor a Child with Rs. 500 per Month /6000 per Year.*

*Our goal is to "Focus on what children can do, their abilities, rather than their disability."*

## ACTION PLANS :

1. Assessment and screening of 0-6 years children.
2. Home and Rehabilitation Centre-based intervention support.
3. For Children therapeutic and for Parents/ care takers counselling support.
4. Physical Assessment and distribution of Aids and Appliances.
5. Continuous medication, physiotherapy and surgery support.
6. Physical nourishment through nutritious food support.
7. Social Security and advocacy -UDID, Aadhaar Card & School Enrolment,

**Sponsor a child because every child needs someone like You**

**ADDRESS**
ORBIT, N.H 65, Near Railway Station, Hydrabad Road,
Humnabad Tq. Dist. Bidar, Karnataka 585330
Contact Number: 8660968063, 9743112739
Email: orbitbidar93@gmail.com website: www.orbitbidar.org

**Fr. Victor Anil Vas**
Director ORBIT

Note : Please WhatsApp your address to the above given number after sending money.